ಓ.ಎಸ್ ನಂ. 153/2021

ಡಿ. ಡಬ್ಲ್ಯೂ 2

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-11-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಆರ್ ಬಿ ನ್ಯಾಯವಾದಿರವರಿಂದಃ

ನಾನು ಪ್ರೌಢ ಶಿಕ್ಷಣವನ್ನು ಪಡೆದ ನಂತರ 2 ವರ್ಷದ ಐಟಿಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹುಟ್ಟಿ ಬೆಳೆದದ್ದು ಕಾರವಾರದಲ್ಲಿ ಇರುತ್ತದೆ. ನಾನು ವಾದಿಯ ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದಿಯರು ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆ ಕೋರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ವಾದಿಯರು ನಿರ್ಧಿಷ್ಟವಾಗಿ ಈ ದಾವೆಯನ್ನು 1 ನೇ ಪ್ರತಿವಾದಿಯ ವಿರುದ್ಧ ದಾವಾ ಆಸ್ತಿಯನ್ನು ಕಾನೂನುಬದ್ಧವಾಗಿ ಭೂಸ್ವಾಧೀನ ಮಾಡದೇ ಯಾವುದೇ ರಸ್ತೆ ನಿರ್ಮಾಣವನ್ನು ದಾವಾ ಆಸ್ತಿಯಲ್ಲಿ ಮಾಡಬಾರದು ಅಲ್ಲದೇ ದಾವಾಆಸ್ತಿಯಲ್ಲಿರುವ ಆವರಣ ಗೋಡೆಯನ್ನು ಕೆಡವಬಾರದೆಂದು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ.

ನನ್ನ ವಕೀಲರಿಗೆ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಸುಮಾರು 50 ವರ್ಷಗಳ ಹಿಂದೆಗಿಂತಲೂ ಎರಡು ಮೀಟರಗಿಂತಲೂ ಹೆಚ್ಚಿನ ಅಗಲದ ರಸ್ತೆ ನಮ್ಮ ಮನೆಗೆ ಹೋಗಿ ಬರಲು ಇದ್ದು , ಸದರಿ ರಸ್ತೆಯನ್ನು ವಾದಿಯರು ಅತಿಕ್ರಮಿಸಿ ಆವರಣ ಗೋಡೆಯನ್ನು ಕಟ್ಟಿದ್ದು , ಅದನ್ನು ತೆರವುಗೊಳಿಸುವ ಕುರಿತು ನಾವು ನಮ್ಮ ಪ್ರತಿವಾದ ಪತ್ರದೊಂದಿಗೆ ಕೌಂಟರ ಕ್ಲೇಮ ಕೇಳಿರುತ್ತೇವೆ. ಸಾಕ್ಷಿಯು ಸ್ವತಃ ನಂದನಗದ್ದಾ ಗ್ರಾಮದ ಸರ್ವೇ ನಂ.175/13ಡ ರಲ್ಲಿ ಪಶ್ಚಿಮ ದಿಕ್ಕಿನಲ್ಲಿ ಸದರಿ ರಸ್ತೆ ಅಸ್ತಿತ್ವದಲ್ಲಿದ್ದು , ಅದನ್ನು ವಾದಿಯರು ಮುಚ್ಚಿರುತ್ತಾರೆ , ಆ ಕಾರಣದಿಂದಲೇ ನಾವು ಪ್ರತಿ ಮಾಗಣಿ ಕೋರಿರುತ್ತೇವೆಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಕಾರವಾರ ತಾಲೂಕು ನಂದನಗದ್ದಾ ಗ್ರಾಮದ ಸ.ನಂ.13 ಅ ರಲ್ಲಿ ನಮ್ಮ ವಾಸ್ತವ್ಯದ ಮನೆ ಇತ್ತು ಎಂದು ಬರೆದಿರುತ್ತೇನೆ ಎಂದರೆ ಸರಿ. ಸದರಿ ಮನೆಯನ್ನು ನನ್ನ ಅಜ್ಜ ಹಾಗೂ ನನ್ನ ತಂದೆಯವರು ನಿರ್ಮಾಣ ಮಾಡಿರುತ್ತಾರೆ. ಸದರಿ ಮನೆಗೆ ನಾವು ತೆರಿಗೆ ತುಂಬುತ್ತಾ ಇದ್ದು , ಈ ಬಗ್ಗೆ ಖಾತಾ ಉತಾರ ನಮ್ಮ ಬಳಿ ಇರುತ್ತದೆ. ಸದರಿ ಖಾತಾ

**ಓ.ಎಸ್ ನಂ. 153/2021**

**ಡಿ. ಡಬ್ಲ್ಯೂ: 2**

ಉತಾರದಲ್ಲಿ ಮನೆ ಯಾರಿಗೆ ಸೇರಿದ್ದು ಎಂಬುದರ ಬಗ್ಗೆ ಮಾಹಿತಿ ಇರುತ್ತದೆ. ಸದರಿ ಮನೆಯ ತೆರಿಗೆ ಉತಾರದಲ್ಲಿ ಮನೆಯ ಮಾಲಿಕನ ಹೆಸರು, ವಿಸ್ತೀರ್ಣ, ಸರ್ವೇ ನಂಬರ ಹಾಗೂ ಗಡಿ ಗರುತುಗಳ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಇರಬಹುದು. ಹೆಸರು, ವಿಸ್ತೀರ್ಣ, ಸರ್ವೇ ನಂಬರುಗಳು ಇರುತ್ತದೆ ಆದರೆ ಗಡಿ ಗುರುತಿನ ನಮೂದು ಇರುವ ಬಗ್ಗೆ ಮಾಹಿತಿ ಇಲ್ಲಾ. ಪ್ರಸ್ತುತ ನಗರಸಭೆಯ ವ್ಯಾಪ್ತಿಯೊಳಗಿನ ಆಸ್ತಿಗಳಿಗೆ ಸಂಬಂಧಪಟ್ಟಂತೆ ಇ–ಸ್ವತ್ತು ಖಾತೆ ಮಾಡಬೇಕಾಗುತ್ತದೆ ಎಂದರೆ ನನಗೆ ಮಾಹಿತಿ ಇಲ್ಲಾ. ನಂದನಗದ್ದಾ ಗ್ರಾಮದ ಸರ್ವೇ ನಂಬರ 13 ಅ ದಲ್ಲಿರುವ ಮನೆಗೆ ಉತಾರ ಇರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಅದು ನಮ್ಮ ತಂದೆಯ ಹೆಸರಿನಲ್ಲಿರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೇ ನಂ.13 ಅ ರಲ್ಲಿ ಈ ಸಧ್ಯ ವಾದಿಯರು ಮನಸ್ಸಿಗೆ ಬಂದಂತೆ ಏಕಾಏಕಿ ಸದರಿ ಜಮೀನನ್ನು ವಿಭಾಗಿಸಿಕೊಂಡು ನನ್ನ ಮತ್ತು ನನ್ನ ತಾಯಿಯವರ ಜಮೀನಿಗೆ 13 ಅ ಎಂದು ಬರೆದಿದ್ದು, ಯಾವಾಗ ಆತರಹ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿಲ್ಲಾ, ವಾದಿಯು ಮಾಹಿತಿ ಕೊಟ್ಟಿಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು)**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**